ಪ್ರಕ್ರಿಯೆ ನಡೆದಿದೆ, ಯಾವುದೇ ರೀತಿಯ ತೊಂದರೆಯಾಗಿಲ್ಲ. ಏಕೋಪಾಧ್ಯಾಯ ತೊಂದರೆ ಬಗ್ಗೆ ಹೇಳುವುದಾದರೆ ಒಂದೊಂದು ಕಡೆ ಏಕೋಪಾಧ್ಯಾಯ ಇದ್ದಲ್ಲಿ ಮಕ್ಕಳ ಸಂಖ್ಯೆಗನುಗುಣವಾಗಿ ಕನಿಷ್ಠ ಒಬ್ಬರನ್ನಾದರೂ ಇಡುವಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲಿ ಸಹಿತ ಶಿಕ್ಷಕರು ಇರುವಂತೆ ನೋಡಿಕೊಳ್ಳುವ ಕೆಲಸವನ್ನು ಮಾಡುತ್ತೇವೆ. ಇನ್ನು ಕೆಲವು ದಿನಗಳಲ್ಲಿ ಎಲ್ಲಾ ರೀತಿಯಿಂದ ಅನುಕೂಲತೆಯನ್ನು ಮಾಡಿ ಯಾವುದೇ ರೀತಿಯಾದಂಥ ತೊಂದರೆಯಾಗದಂತೆ ವ್ಯವಸ್ಥೆ ಮಾಡುತ್ತೇವೆ.

<u>ಪ್ರಾಥಮಿಕ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳು :-</u>

117 (479) ಶ್ರೀ ಪಾಟೀಲ್ ಬಿ.ಆರ್. (ಆಳಂದ) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಎಷ್ಟು; ಅವು ಯಾವುವು; ವಿವರ ನೀಡುವುದು;

ಆ) ಇದರಲ್ಲಿ ಕೇಂದ್ರ ನೆರವಿನಿಂದ ನಡೆಯುವ ಯೋಜನೆಗಳು ಯಾವುವು?

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ತೆಗೆದುಕೊಂಡ ಕಾರ್ಯಕ್ರಮಗಳು ಒಟ್ಟು 18 (ರಾಜ್ಯವಲಯ 12, ಜಿಲ್ಲಾ ವಲಯ 5 ತಾಲ್ಲೂಕು ವಲಯ 1 (ವಿವರ ಅನುಬಂಧದಲ್ಲಿ ಒದಗಿಸಿದೆ)

ಆ) ಇದರಲ್ಲಿ ಕೇಂದ್ರ ನೆರವಿನಿಂದ ನಡೆಯುವ ಯೋಜನೆಗಳು ಯಾವುವೆಂದರೆ

1) ಸರ್ವ ಶಿಕ್ಷಾ ಅಭಿಯಾನ

2) ಬಿಸಿ ಊಟ ಯೋಜನೆ (1 ರಿಂದ 5 ನೇ ತರಗತಿವರೆಗೆ)

3) ಅಂಗವಿಕಲ ಮಕ್ಕಳಿಗೆ ಸಮಗ್ರ ಶಿಕ್ಷಣ

ಕರ್ನಾಟಕ ವಿಧಾನಸಭಾ ಸದಸ್ಯರಾದ ಶ್ರೀ ಪಾಟೀಲ್ ಬಿ.ಆರ್. (ಆಳಂದ) ರವರ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 479 ಕ್ಕೆ ಅನುಬಂಧ

2007–08 ಸಾಲಿನ ಯೋಜನಾ ಕಾರ್ಯಕ್ರಮಗಳ ವಿವರ :

ಕ್ರ.ಸಂ	ಕಾರ್ಯಕ್ರಮಗಳ ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
1	ಪರಿವೀಕ್ಷಣೆ	67.46
2	ವಿದ್ಯಾವಿಕಾಸ	5273.00
3	ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು	801.63
4	ಸರ್ವ ಶಿಕ್ಷಾ ಅಭಿಯಾನ ಸಮಿತಿ	23000.00
5	ಬ್ಲಾಕ್ ಮತ್ತು ಕ್ಲಸ್ಟರ್ ರಿಸೋರ್ಸ್ ಸೆಂಟರ್	1000.00
6	ಪುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಾಥಮಿಕ ಗ್ರಾಮೋದಯ ಯೋಜನೆ	325.00
7	ಕುವೆಂಪು ಮಾದರಿ ಶಾಲೆಗಳು	160.00
8	ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು	40.00
9	ಸಾರ್ವಜನಿಕ ಶಿಕ್ಷಣ ಆಯುಕ್ತಾಲಯ, ಗುಲ್ಬರ್ಗಾ	20.00
10	ಸಾರ್ವಜನಿಕ ಶಿಕ್ಷಣ ಆಯುಕ್ತಾಲಯ, ಧಾರವಾಡ	20.00
11	ಪಂಚ ಸೌಲಭ್ಯ	300.00
12	ಅತೀ ವಿಶಿಷ್ಟ ಸೇವೆಗಾಗಿ ಉತ್ತೇಜನ ನೀಡಿಕೆ (ಪ್ರಾಥಮಿಕ ಶಾಲಾ ಶಿಕ್ಷಕರಿಗೆ)	100.00
	ರಾಜ್ಯ ಯೋಜನೆ (ಒಟ್ಟು)	**31107.09**
	ಜಿಲ್ಲಾ ವಲಯ :-	
1	ಸೇವೆಯಲ್ಲಿರುವ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮ	4.07
2	ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು (ಅಕ್ಷರ ದಾಸೋಹ)	33017.40

3	ಸರ್ವ ಶಿಕ್ಷಣ ಅಭಿಯಾನದ ಸಂಸ್ಥೆ	10764.95
4	ಗುತ್ತಿಗೆ ಆಧಾರದ ಶಿಕ್ಷಕರ ಸಂಭಾವನೆ	245.50
5	ಅಂಗವಿಕಲ ಮಕ್ಕಳಿಗೆ ಸಮಗ್ರ ಶಿಕ್ಷಣದ ಕೇಂದ್ರ ಪುರಸ್ಕೃತ ಯೋಜನೆ	1181.60
	ಜಿಲ್ಲಾ ವಲಯ (ಒಟ್ಟು)	**45213.52**
	ತಾಲ್ಲೂಕು ವಲಯ :–	
1	ಸೇರ್ಪಡೆ ಮತ್ತು ಮಾರ್ಪಾಡು	597.25
	(ರಾಜ್ಯವಲಯ+ಜಿಲ್ಲಾವಲಯ+ತಾಲ್ಲೂಕುವಲಯ ಒಟ್ಟು)	**76917.86**

ಶ್ರೀ ಬಿ.ಆರ್. ಪಾಟೀಲ್ :– ಪ್ರಾಥಮಿಕ ಶಿಕ್ಷಣ ಬಹಳ ದೊಡ್ಡ ಸಂಖ್ಯೆಯಲ್ಲಿ ಇರತಕ್ಕಂಥ ಇಲಾಖೆಯಾಗಿದೆ. ಈ ಇಲಾಖೆಯಲ್ಲಿ ಅವರ ಕಾರ್ಯಕ್ರಮಗಳ ಪಟ್ಟಿ ನೋಡಿದರೆ ಇನ್ನೂ ಅನೇಕ ಕಾರ್ಯಕ್ರಮಗಳ ಬಗ್ಗೆ ಅವರು ಹೇಳಿಲ್ಲ, ಚಿಣ್ಣರಗಳ ಕಾರ್ಯಕ್ರಮ, ಸೆನ್ಸ್‌ಸ್ ಮಾಡಿಸಲಿಕ್ಕೆ ಕಳುಹಿಸುವುದು, ರೇಷನ್ ಕಾರ್ಡ್ ಪಟ್ಟಿ ಮಾಡಲಿಕ್ಕೆ, ದನಗಳ ಸೆನ್ಸಸ್ ಮಾಡಲಿಕ್ಕೆ ಕಳುಹಿಸುತ್ತಾರೆ, ಅಡಿಗೆ ಮಾಡಿಸುವುದು, ಒಟ್ಟಿನಲ್ಲಿ ಇವೆಲ್ಲಾ ಸೇರಿ ಇಲಾಖೆಯ ಮೇಲೆ ಜಾಸ್ತಿ ಭಾರ ಬೀಳುತ್ತಿರುವುದರಿಂದ ಶಿಕ್ಷಣ ಗುಣಮಟ್ಟದ ಮೇಲೆ ಬಹಳ ದೊಡ್ಡ ಪರಿಣಾಮ ಬೀರುತ್ತಿದೆ. ನಾನು ನಿನ್ನೆ ಪತ್ರಿಕೆಗಳಲ್ಲಿ ಓದಿದ್ದೇನೆ, ಈ ಪಾರ್ಲಿಮೆಂಟರಿ ಶಿಕ್ಷಣಕ್ಕೆ ಸಂಬಂಧಪಟ್ಟಂಥ ಶಿಕ್ಷಣ ಸಮಿತಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಕಳಪೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ. ಈ ನಿಟ್ಟಿನಲ್ಲಿ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆ ನ್ನುವುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಸವರಾಜ್ ಎಸ್. ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಕ್ಷಣ ಸಚಿವರು) :– ಮಾನ್ಯ ಶಾಸಕರು ಹೇಳುವುದನ್ನು ಒಪ್ಪುತ್ತೇವೆ. ಶಿಕ್ಷಕರನ್ನು ೀಷನ್ ಕಾರ್ಡ್, ಜನ ಹಾಗೂ ದನ ಗಣತಿಯ ಕೆಲಸಗಳನ್ನು ಮಾಡಲಿಕ್ಕೆ ಳುಹಿಸುತ್ತಿದ್ದಾರೆ. ಇದರ ಬಗ್ಗೆ ಸಚಿವ ಸಂಪುಟದಲ್ಲಿ ಒಂದು ತೀರ್ಮಾನವನ್ನು ಗೆದುಕೊಂಡಿದ್ದೇವೆ. ಏನೆಂದರೆ ರಾಜ್ಯದಲ್ಲಿ ಎಷ್ಟು ಜನ ಸರ್ಕಾರಿ ನೌಕರರು ದ್ದಾರೆ, ಆ percentage ಪ್ರಕಾರ ಮಾತ್ರ ಎಲ್ಲಾ ಕೆಲಸಗಳಿಗೆ ಕಳುಹಿಸಬೇಕೆಂದು ೀರ್ಮಾನವಾಗಿದೆ. ಚುನಾವಣಾ ಆಯೋಗದವರು ಕಡ್ಡಾಯವಾಗಿ ಇವರನ್ನು

ಕಳುಹಿಸಬೇಕೆಂದು ಮಾಡಿದ್ದಾರೆ. ಚುನಾವಣಾ ಆಯುಕ್ತರಿಗೆ ಬೇರೆ ಬೇರೆ ಜಿಲ್ಲಾಧಿಕಾರಿಗಳ ಮೂಲಕ ತಿಳಿಸಿ ಬರುವಂಥ ದಿವಸಗಳಲ್ಲಿ ಈ ಭಾರ ಕಡಿಮೆ ಮಾಡುತ್ತೇವೆ. 15 ಜನ ಶಿಕ್ಷಕರಿರುವ ಕಡೆ 13 ಜನರನ್ನು ಚುನಾವಣಾ ಆಯೋಗದವರು ಈ ಕೆಲಸಕ್ಕೆ ಹಾಕಿದ್ದರು.

ಹೀಗಾಗಿ ತೊಂದರೆಯಾಗುತ್ತಿದ್ದು ಇದರ ಬಗ್ಗೆ ನಾವು ಕ್ರಮತೆಗೆದುಕೊಂಡಿದ್ದೇವೆ. ಅನಾವಶ್ಯಕವಾದ ಕೆಲವು ಯೋಜನೆಗಳಿವೆ. ಮಾನ್ಯ ಶಾಸಕರು ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವುದರೊಂದಿಗೆ ಶಿಕ್ಷಕರನ್ನು ಬೇರೆ ಬೇರೆ ಕಾರ್ಯಕ್ರಮಗಳಿಗೆ ಕಳುಹಿಸುವುದು ಜಾಸ್ತಿಯಾಗಿದೆ. ಶಾಲೆಯಲ್ಲಿ ಶಿಕ್ಷಣ ಗುಣ ಮಟ್ಟ ಕಡಿಮೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ ಇದಕ್ಕೆ ನನ್ನ ಸಹಮತಿಯೂ ಇದೆ. ಅದನ್ನು ಸಾಧ್ಯವಾದ ರೀತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಕಡಿಮೆ ಮಾಡಿ ಮಕ್ಕಳಿಗೆ ಆಡಳಿತಾತ್ಮಕವಾಗಿ ಕಲಿಯಬೇಕಾದಂಥ ಒಂದು ವ್ಯವಸ್ಥೆ ಇರಬೇಕಾಗುತ್ತದೆ.

ಆ ದೃಷ್ಟಿಯಿಂದ ಈ ಎಲ್ಲಾ ವಿಚಾರಗಳನ್ನು ನಾನು ಕ್ರೋಢಿಕರಿಸಿ ಒಂದು ಸಭೆಯನ್ನು ಮಾಡಿ ಪ್ರಾಥಮಿಕ ಶಾಲೆ ಇರಬಹುದು, ಪ್ರೌಢ ಶಾಲೆಯಿರಬಹುದು, ಶಿಕ್ಷಕರನ್ನು ಮಕ್ಕಳಿಗೆ ಪಾಠ ಹೇಳುವುದನ್ನು ಬಿಟ್ಟು ಬೇರೆ ಬೇರೆ ಕೆಲಸಕ್ಕೆ ನಿಯೋಜನೆ ಮಾಡುವುದನ್ನು ಕಡಿಮೆ ಮಾಡುವಂಥ ಕೆಲಸವನ್ನು ಮಾಡುತ್ತೇವೆ, ಆದರೂ ಈಗ ಶಿಕ್ಷಕರಿಗೆ ನಾವು ತರಬೇತಿಯನ್ನು ಕೊಡುತ್ತಿದ್ದೇವೆ. ಅವರ ಗುಣಮಟ್ಟವನ್ನು ಹೆಚ್ಚು ಮಾಡಲಿಕ್ಕೆ ಮೌಲ್ಯಾಂಕವನ್ನು ಮಾಡಿದ್ದೇವೆ. ಅನೇಕ ವರ್ಷಗಳಿಂದ ಇದ್ದಂಥ ಯೋಜನೆಯೊಂದಿಗೆ ಹೊಸ ಹೊಸ ಯೋಜನೆಗಳನ್ನು ಹಾಕಿ ಸಾಧ್ಯವಾದ ಮಟ್ಟಿಗೆ ಎಲ್ಲಾ ರೀತಿಯಿಂದ ಶಿಕ್ಷಣವನ್ನು ಸುಧಾರಣೆ ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮಾನ್ಯ ಶಾಸಕರು ಹೇಳಿದಂಥ ಕೆಲವು ವಿಚಾರಗಳನ್ನು ನಾನು ಚರ್ಚೆ ಮಾಡಿ ಅನಾವಶ್ಯಕವಾದ ವಿಚಾರಗಳೇನಿವೆ ಅವುಗಳನ್ನು ತೆಗೆಯುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಒಂದು ವಿಷಯ.....

ಅಧ್ಯಕ್ಷರು :- ಈಗ ಕಿನೇಕರ್ ಪ್ರಶ್ನೆ ಕೇಳಿ. ಪಾಟೀಲ್‌ರವರೇ ನಿಮಗೆ ಸಚಿವರು extensive ಆಗಿ ಅವರು ಉತ್ತರ ಹೇಳಿದ್ದಾರೆ. ಸಮಯವನ್ನು ನೋಡಿ ನೀವೇ.

ಶ್ರೀ ಬಿ.ಆರ್. ಪಾಟೀಲ್ :- ಇದರ ಹಿಂದಿನ ಚಿಂತನೆ ಈ ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಗ್ರಾಮೀಣ ಮಕ್ಕಳಿಗೆ ಒಳ್ಳೆಯ ಗುಣ ಮಟ್ಟದ ಶಿಕ್ಷಣವನ್ನು ಕೊಡದೇ ಹೋದರೆ ಬಹಳ ದೊಡ್ಡ ಅಪಾಯವಾಗುತ್ತದೆ. ಆ ಕಾರಣಕ್ಕಾಗಿ ಆಡಳಿತದಲ್ಲಿ ಏನಾದರೂ ಸುಧಾರಣೆ ಮಾಡಲಿಕ್ಕೆ ತಯಾರು ಇದ್ದಾರೆಯೇ? ಎಲ್ಲಾ ಕಾರ್ಯಕ್ರಮಗಳಿಗೆ ಸರ್ಕಾರಿ ಶಿಕ್ಷಕರನ್ನು ನಿಯೋಜಿಸುವುದು ಒಂದು ಕಡೆಯಾದರೆ, ನಿಮ್ಮಲ್ಲೇನಾದರೂ ಸುಧಾರಣೆಯನ್ನು ತಂದು ಇದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡುತ್ತಿರುವಿರಾ? ಪ್ರೌಢಶಾಲೆಗಳಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡುವುದನ್ನು ನಿಲ್ಲಿಸಿಬಿಡಿ, ಏಕೆಂದರೆ ಎಲ್ಲಾ ಪ್ರೌಢಶಾಲೆಗಳಿಗೆ ಹೋಗಿ ಶಾಸಕರು ನೋಡುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ಅದನ್ನು ನಿಲ್ಲಿಸಿಬಿಡಿ. ಈ ನಿಟ್ಟಿನಲ್ಲಿ ಶಿಕ್ಷಣದಲ್ಲಿ ಕೆಲವು ಅಮೂಲಾಗ್ರವಾದ ಬದಲಾವಣೆಗಳನ್ನು ತರಲಿಕ್ಕೆ ಏನಾದರೂ ಪ್ರಯತ್ನವನ್ನು ಮಾಡುತ್ತಿರುವಿರಾ ಎಂಬುದನ್ನು ತಿಳಿಸಬೇಕು.

ಶ್ರೀ ಬಸವರಾಜ್ ಎಸ್. ಹೊರಟ್ಟಿ :- ಮಾನ್ಯ ಸಭಾಧ್ಯಕ್ಷರೇ, ಅನೇಕ ಅಡೆತಡೆಗಳು ಬರುತ್ತಿವೆ. ಬದಲಾವಣೆಗಳನ್ನು ತರುವಾಗ ಬಹಳಷ್ಟು ವಿರೋಧಗಳು ಬರುತ್ತವೆ. ಈ ಎಲ್ಲಾ ವಿರೋಧಗಳಿದ್ದರೂ ಸಹ ಮಾನ್ಯ ಶಾಸಕರಾದ ಬಿ.ಆರ್. ಪಾಟೀಲ್‌ರವರು ಹೇಳಿದ ಎಲ್ಲಾ ವಿಚಾರಗಳನ್ನು ನಾವು ಚಿಂತನೆ ಮಾಡುತ್ತಿದ್ದೇವೆ. ಶಿಕ್ಷಕರಿಗೆ ತರಬೇತಿ ಕೊಡುವ ವ್ಯವಸ್ಥೆ ಇರುತ್ತಿರಲಿಲ್ಲ. ಹಳೆಯ ತರಬೇತಿ ಪಡೆದ 10 ವರ್ಷಗಳ ಹಿಂದೆ ತರಬೇತಿ ಪಡೆದ ಶಿಕ್ಷಕರಿಗೆಲ್ಲಾ Refresher Courses ಮಾಡುವಂಥ ಬೇರೆ ಬೇರೆ ಕೆಲಸಗಳನ್ನು ಮಾಡಿ ಶಿಕ್ಷಣ ಕ್ಷೇತ್ರ ಹೆಚ್ಚು ಬಲಿಷ್ಠವಾಗಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಆ ಎಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಹಾಗೆಯೇ ಮಾನ್ಯ ಬಿ.ಆರ್. ಪಾಟೀಲ್‌ರವರು ನೀಡಿರುವ ಎಲ್ಲಾ ಸಲಹೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

<u>ಮರಾಠಿ ಶಿಕ್ಷಕರ ವರ್ಗಾವಣೆ :-</u>

118 (1186) ಶ್ರೀ ಮನೋಹರ್ ಕಲ್ಲಪ್ಪ ಕಿನೇಕರ್ (ಉಚ್ಚಗಾಂವ್) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ತಾಲ್ಲೂಕು ವಲಯದಿಂದ ಬೆಳಗಾವಿ ನಗರ ವಲಯಕ್ಕೆ ಎಷ್ಟು ಸಂಖ್ಯೆಯ ಮರಾಠಿ ಹೆಚ್ಚುವರಿ ಶಿಕ್ಷಕರನ್ನು ವರ್ಗಾಯಿಸಲಾಗಿದೆ;